# ಕುಂಟಮ್ಮ ಮನೆಯಲ್ಲಿ ಕುಂತಮ್ಮ

■ ಸಿಂಧುಶ್ರೀ
ಕಲೆ: ಸಂತೋಷ್ ಸಸಿಹಿತ್ಲು

ಸರಿಸುಮಾರು ಒಂದು ತಿಂಗಳಾಗುತ್ತಾ ಬಂತು ನೀನು ನನ್ನ ದೇಹದ ಭಾಗವೇ ಆಗಿ. ನಿನಗೆ ವಿದಾಯ ಹೇಳುವ ಸಮಯ ಹತ್ತಿರ ಬಂದಿದೆ. ಕಾಲ ಎಲುಬು ಮುರಿದಿದೆ ಎಂದ ತಕ್ಷಣ ನನ್ನ ಕಾಲಿಗೆ ರಕ್ಷಾಗವಚವಾಗಿ ನೀನು ಆಸರೆಯಾದೆ. ಕಾಲಿಗೆ ಚಕ್ರ ಕಟ್ಟಿದಂತೆ ತಿರುಗಾಡುತ್ತಿದ್ದ ನನಗೆ ಸುಮಾರು ಒಂದು ತಿಂಗಳು ಮನೆಯಲ್ಲೇ ಕಾಲನ್ನು ನೆಲಕ್ಕೂ ಸಹ ಇಡಲಾಗದಂತೆ ಕಾಲಿಗೆ ಸೆಕ್ಯೂರಿಟಿ ಗಾರ್ಡ್ ಆಗಿಬಿಟ್ಟೆ. ಆರಂಭದಲ್ಲಿ ಇಷ್ಟು ಭಾರದ ನಿನ್ನನ್ನು ಹೊತ್ತುಕೊಂಡು ಒಂಟಿಕಾಲಲ್ಲಿ ಕುಂಟುವುದು ಬಹಳ ಪ್ರಯಾಸದ ಸಂಗತಿ. ಆಗೆಲ್ಲ ನಿನ್ನನ್ನ ಯದ್ವಾತದ್ವ ಮನಸ್ಸಿನಲ್ಲಿ ಬೈದುಕೊಳ್ಳುತ್ತಿದ್ದೆ. ದಿನ ಕಳೆದಂತೆ ನೀನು ನನ್ನ ಸ್ನೇಹಿತೆಯಾದೆ. ಒಂಟಿ ಕಾಲಲ್ಲಿ ಕುಂಟುವುದು ತುಸು ಅಭ್ಯಾಸವು ಆಯಿತು. ಈ ಅವಧಿಯಲ್ಲಿ ನೀನು ಹೇಳಿ ಕೊಟ್ಟ ಪಾಠ ಅಪಾರ.

ಆ 'ನೀನೇ' ಫ್ರಾಕ್ಚರ್ ಕಾಲಿಗೆ ಹಾಕಿದ ಬಿಳಿ, ನೀಲಿ ಬ್ಯಾಂಡೇಜ್.

ನಾನು 'ಕುಂಟಮ್ಮ ಮನೆಯಲ್ಲಿ ಕುಂತಮ್ಮ' ಆದ ಮೇಲೆ ಮನೆಯ ಹೆಚ್ಚಿನ ಕೆಲಸ ಕಾರ್ಯಗಳೆಲ್ಲ ಅನಿವಾರ್ಯವಾಗಿ ಗಂಡನಿಗೆ ಹಸ್ತಾಂತರವಾಯಿತು. ಊರಿಗೆ ಹೋದಾಗಲೆಲ್ಲ ನೆಂಟರಿಷ್ಟರ ಮುಂದೆ ನಮ್ಮ ಮನೆಯ ಮಗ ಚಿಕ್ಕಂದಿನಿಂದಲೂ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದ ಎಂದು ಅವರ ಬಗ್ಗೆ ಹೊಗಳಿದಾಗ ನನ್ನ ಮನಸ್ಸಿನೊಳಗೆ ಅನುಮಾನ ಸದಾ ಕಾಡುತ್ತಿತ್ತು. ಆದರೆ ಯಾವಾಗ ನಾನು ಯಾವ ಕೆಲಸವನ್ನು ಮಾಡದೆ ಮನೆಯಲ್ಲಿ ಕುಳಿತುಕೊಳ್ಳುವ ಪರಿಸ್ಥಿತಿ ಬಂತು. ಆಗ ಆ ಮಾತಿನ ಅರ್ಥ ಸ್ಪಷ್ಟವಾಯಿತು. ಮನೆಯ ಮಗಳು ನಾನು ಮಾಡಿದ ದೋಸೆಯನ್ನು ಒಂದೇ ಕಷ್ಟದಲ್ಲಿ ತಿನ್ನುತ್ತಿದ್ದರೆ 'ಅಪ್ಪ ನೀನು ಚೆನ್ನಾಗಿ ದೋಸೆ ಮಾಡುತ್ತೀಯಾ, ಎರಡು ದೋಸೆ ಹಾಕು' ಎನ್ನಲು ಶುರು ಮಾಡಿದಳು. ಊರಿಗೆ ಹೋದಾಗಲೆಲ್ಲ 'ಸಿಂಧು ಚಹಾ ನೀನು ಚೆನ್ನಾಗಿ ಮಾಡುತ್ತೀಯಾ, ನೀನೇ ಮಾಡು' ಎಂದು ಹೇಳುತ್ತಿದ್ದರು. ಚಹಾ ಸೇವನೆ ನನಗೆ ಅತ್ಯಂತ ಪ್ರಿಯವಾದದರಿಂದ

